ಗೋಡೆ ಕುಸಿದಾಗ ಅದನ್ನು ಕೆಡವಿ ಮೂರು ಭಾಗ ಬರುವಂತೆ ಮನೆ ಕಟ್ಟಿಸಿದ್ದಳು. ಒಂದು ಭಾಗ ಗ್ರಾಮ ಪಂಚಾಯಿತಿ ಆಫೀಸ್‌ಗೆ. ಎರಡನೇ ಭಾಗದಲ್ಲಿ ಪುಸ್ತಕಗಳ ಕಪಾಟುಗಳಿರುವ ಲೈಬ್ರರಿ, ಅಲ್ಲೊಂದು ಟಿ.ವಿ, ಕುರ್ಚಿಗಳು-ಮೇಜು, ದಿನ- ವಾರ- ಮಾಸ ಪತ್ರಿಕೆಗಳು ಬರುವ ವ್ಯವಸ್ಥೆ. ಇದು ಊರಜನರ ಉಪಯೋಗಕ್ಕೆ. ನಡುವಿನ ಭಾಗ ತನ್ನವಾಸ. ದೊಡ್ಡ ಹಾಲ್‌ನಲ್ಲಿ ಐದಾರು ಹೊಲಿಗೆ ಮಿಷನ್‌ಗಳು ಊರ ಹೆಣ್ಣುಮಕ್ಕಳಿಗೆ ಬಟ್ಟೆ ಹೊಲಿಯಲು, ಬ್ಲಾಕ್ ಬೋರ್ಡ್, ಗೈಡ್‌ಗಳು ಇವೆ. ರಿಟೈರ್ಡ್ ಮೇಷ್ಟ್ರು ಶಂಕ್ರಪ್ಪ ಊರ ಮಕ್ಕಳಿಗೆ ಪಾಠ ಮಾಡ್ತಾರೆ. ಸ್ತ್ರೀಶಕ್ತಿ ಸಂಘದ ಮಹಿಳೆಯರ ಆಫೀಸೂ ಇದೆ.

ಈ ಮನೆ ಊರಿನವರದ್ದೇ. ಎರಡು ಬಾರಿ ಪಂಚಾಯ್ತಿ ಅಧ್ಯಕ್ಷಳಾಗಿ ಅಕ್ಕವ್ವ, ರಸ್ತೆ ಮಾಡಿಸಿದ್ದಾಳೆ, ಕುಡಿಯುವ ನೀರಿನ ನಲ್ಲಿ ಹಾಕಿಸಿದ್ದಾಳೆ. ಸ್ತ್ರೀಶಕ್ತಿ ಸಂಘ ಕಟ್ಟಿ ಹೆಣ್ಣುಮಕ್ಕಳಿಗೆ ಹಲವು ರೀತಿಯಲ್ಲಿ ಬದುಕುವ ದಾರಿ ತೋರಿಸಿದ್ದಾಳೆ. ಬದುಕಿನಲ್ಲಿ ಸಂತೃಪ್ತಿ ಇದೆ ಆಕೆಗೆ. ತನ್ನದಾದ ಆರೆಕರೆ ಜಮೀನನ್ನು ಸರ್ಕಾರಕ್ಕೆ ಆಸ್ಪತ್ರೆ ಕಟ್ಟಿಸಲು ಕೊಡಬೇಕು. ಜೊತೆಗೆ ಮೂರು ಲಕ್ಷ ಹಣವನ್ನೂ ಕೊಡುತ್ತಾಳಂತೆ. ಲಾಯರ್ ಶಿವಾನಂದ ಅದರ ಜವಾಬ್ದಾರಿ ತಗೊಂಡಿದ್ದಾರೆ.

ಶಿವಮೊಗ್ಗದ ಆನವಟ್ಟಿಯ ಬಡ ಪೂಜಾರಿಯ ಮಗಳು ಕೃಷ್ಣಾಬಾಯಿ. ಬಳ್ಳಾರಿ ಜಿಲ್ಲೆಯ ಈ ಊರಿನ ಕುಲಕರ್ಣಿ ಮನೆಯವರು ಹೆಣ್ಣು ಕೇಳಿಕೊಂಡು ಬಂದಿದ್ದರು. ಶ್ರೀಮಂತರಂತೆ. ಬಡತನದಾಗೆ ಬೆಂದಿದ್ದ ಅಪ್ಪ ಹೆಣ್ಣು ಕೊಟ್ಟ. ಲಗ್ನವಾಗಿ ಬಂದ ಮೇಲೇ ಅವಳಿಗೆ ಗೊತ್ತಾಗಿದ್ದು ಗಂಡನಿಗೆ ಬುದ್ಧಿಮಾಂದ್ಯ. ತೀರಾ ಅಲ್ಲ. ಸ್ವಂತ ತಿಳಿವಳಿಕೆಯೇ ಇಲ್ಲದ ಹೇಳಿದ ಕೆಲಸ ಮಾಡಿ ಬಿದ್ದಿರುವ ಗಂಡು. ಎಲ್.ಎಸ್.ವರೆಗೆ ಓದಿದ್ದಳು ಆಕೆ. ಆಘಾತವಾಗಿ ಅತ್ತಳು.

ಶೀನಪ್ಪ ಕುಲಕರ್ಣಿ ಶ್ಯಾನುಭೋಗಿಕೆ ಮಾಡುತ್ತಿದ್ದರು. ಅವರ ಇಬ್ಬರು ಗಂಡು ಮಕ್ಕಳು ಡಾಕ್ಟರ್ ಆಗಿ, ಬ್ಯಾಂಕ್ ಮ್ಯಾನೇಜರ್ ಆಗಿ ಪೇಟೆ ಸೇರಿದ್ದರು. ಶ್ಯಾನುಭೋಗಿಕೆ ಹೋಗಿತ್ತು. ಅವರ ತಮ್ಮ ನಾರ್ಣಪ್ಪ ಕುಲಕರ್ಣಿ ಬುದ್ಧಿಮಾಂದ್ಯದವ. ಅವನ ಹೆಂಡತಿ ಭಾರೀ ಚಾಲಾಕಿ. ಪಾಲಿಗೆ ಬಂದ ಊರ ಹೊರಗಿನ ಮನೆ, ಹದಿನೆಂಟು ಎಕರೆ ಜಮೀನಿನ ಉಸ್ತುವಾರಿ ಹೊತ್ತಳು. ಮೂವರು ಗಂಡುಮಕ್ಕಳು. ಹಿರೇ ಮಕ್ಕಳಿಬ್ಬರು ಓದಿನಾಗೆ ಜಾಣರಲ್ಲ. ಕೆಲಸಗಾರರು. ಬೆರಳು ತೋರಿಸಿದರೆ ಹಸ್ತ ನುಂಗುವ ಚಾಣಾಕ್ಷರು. ಕೊನೇ ಮಗ ಅಪ್ಪನಂತೆಯೇ ಬುದ್ಧಿಮಾಂದ್ಯ. ಮೊದಲ ಸೊಸೆಯರಿಬ್ಬರೂ ನಾರ್ಣಪ್ಪನ ಹೆಂಡತಿ ಪಾರ್ವತಿಯ ಅಣ್ಣಂದಿರ ಮಕ್ಕಳು. ಅತ್ತೆಗೆ ಅವರ ಮೇಲೆ ಪ್ರೀತಿ. ಕೊನೆಯ ಬಡಸೊಸೆ ಕೃಷ್ಣಾಬಾಯಿಗೆ ಮನೆಯ ಕತ್ತೆ ಚಾಕರಿ. ಸೊಸೆಯರು ಬಸಿರು ಇಲ್ಲಾ ಬಾಣಂತಿಯರು. ಮನಿತುಂಬಾ ಸಣ್ಣ ಮಕ್ಕಳು. ಅವರಿಗೆ ಕೆಲಸ ಮಾಡಲಾಗ್ತಿರಲಿಲ್ಲ. ಎಲ್ಲಾ ಕೆಲಸ ಕೊನೇ ಸೊಸೆಯದೇ. ಜೊತೆಗೆ ಬೈಗುಳ, ಕಿರುಕುಳ. ಕೃಷ್ಣಾಬಾಯಿ ಅಸಹಾಯಕಳಾಗಿದ್ದಳು. ಅಪ್ಪ ಸತ್ತಿದ್ದ. ಮಲತಾಯಿಗೆ ಅವಳು ಬೇಡ. ಗಂಡ ಇದ್ದೂ ತಿಳಿವಳಿಕೆ ಇಲ್ಲದವ. ಬಸಿರಾಗಿದ್ದಳು. ಬಸಿರು ಇಳೀತು. ಅತ್ತಳು. ಆದೀತು ಮುಂದೆ ಎಂಬ ಸಮಾಧಾನ.

ಊರಕೆರೆಗೆ ಬಟ್ಟೆ ಒಗೆಯಲು ಹೋಗಿದ್ದಳು ಕೃಷ್ಣಾಬಾಯಿ. ವಾಪಸ್ ಮನೆಗೆ ಬಂದಾಗ ಊರಜನ ಮನೆ ಮುಂದೆ ನಿಂತಿದ್ದರು. ಒಳಹೋಗಿ ನೋಡಿದರೆ ಗಂಡ ಹಜಾರದ ಹೊರಸಿನ ಮೇಲೆ ಮಲಗಿದ್ದ. ಸತ್ತಿದ್ದ. ಡಾಕ್ಟರ್ ಬಂದು ಹೃದಯಾಘಾತ ಅಂದರು. ಕುಸಿದು ಬಿದ್ದು ಎಚ್ಚರ ತಪ್ಪಿದ್ದಳು.

ಗಂಡ ಸತ್ತ ಹತ್ತನೇ ದಿನ ಅವಳ ತಲೆಕೂದಲು ತೆಗೆಸಿ, ಕೆಂಪು ಸೀರೆ ಉಡಿಸಿದರು.

'ಚಂದ ಅದಾಳೆ. ಏನಾರ ಆದರೆ ಮನೆ ಮರ್ಯಾದೆ ಹೋಗ್ತದೆ. ಮಡಿ ಆಗಿ ಮನೀ ಅಡಿಗಿ ಮಾಡಲಿ. ಇಬ್ಬರು ಸೊಸೇರು ಬಸುರಿ ಇಲ್ಲ ಬಾಣಂತಿ... ಸಣ್ಣ ಮಕ್ಕಳ ತಾಯಂದಿರು. ನನ್ನ ಕೈಲಾಗಲ್ಲ' ಅತ್ತೆಯ ಕಟ್ಟಾಜ್ಞೆ.

ಗಳಗಳ ಅತ್ತಳು ಆಕೆ. ತವರವರು ಬರಲಿಲ್ಲ. ಅವಳಿಗ್ಯಾರೂ ಗತಿಯಿಲ್ಲ. ಮಡಿ ಹೆಂಗಸಾಗಿ ದಿನವಿಡೀ ದುಡಿದಳು.